ನೀಡಿದವನಾ॥1॥ ರಕ್ಕಸರ ಕುಲವನ್ನು ಕೊಂದವನಾ। ಛಲದಿಂದ ಲಂಕೆಯನು ದಹಿಸಿದವನಾ। ರಘುಪತಿಗೆ ಮಣಿಯನ್ನು ಇತ್ತವನಾ। ಶ್ರೀರಾಮನ ಜಯಕೆ ಕಾರಣನಾದವನಾ॥2॥ ಲಕ್ಷ್ಮಣನ ಪ್ರಾಣ ಉಳಿಸಿದವನಾ। ನಿತ್ಯ ಪ್ರಭು ಸೇವೆಯಲಿ ನಿಂತವನಾ। ನಾವೆಲ್ಲ ನೆನೆಯುವ ಮಾರುತಿಯಾ। ನಮ್ಮೆಲ್ಲರ ತಾಳ್ಮೆದ್ಧನುಮಂತನಾ॥3॥

ಲಾಲಿ ತ್ರಿಭುವನ ಪಾವನ **ರಾಗ: ಕುರಂಜಿ**

ಲಾಲಿ ತ್ರಿಭುವನ ಪಾವನ ಲಾಲಿ॥ಪ॥ ಅಂಜನಾ ದೇವಿಯ ಕಂದಗೆ ಲಾಲಿ। ಕಂಜಾಕ್ಷಿಗೆ ಮುದ್ರಿಕೆಯಿತ್ತವಗೆ ಲಾಲಿ। ಅಂಜದೆ ಅಸುರರ ಕೊಂದಗೆ ಲಾಲಿ। ಸಂಜೀವನಗಿರಿ ತಂದಗೆ ಲಾಲಿ॥1॥ ಕುಂತಿಯುದರದಿ ಬಂದಗೆ ಲಾಲಿ। ದಂತಿಯ ಗಗನಕ್ಕೆ ಬಗೆದಗೆ ಲಾಲಿ। ಭ್ರಾಂತನ ಉದರವ ಬಗೆದಗೆ ಲಾಲಿ। ಚಿಂತಾಮಣಿ ಭೀಮರಾಯಗೆ ಲಾಲಿ॥2॥ ಸೋಹಂ ಎಂಬರ ತರಿದಗೆ ಲಾಲಿ। ದಾಸೋಹಂ ಎಂಬರ ಪೊರೆದಗೆ ಲಾಲಿ। ಮೋಹನವಿಠಲನ್ನ ಭಜಿಪಗೆ ಲಾಲಿ। ಸ್ನೇಹದಿಭಕುತರ ಪೊರೆದಗೆ ಲಾಲಿ॥3॥

ಮಂಗಳ

ಕೇಸರಿ ತನಯಗೆ ಮಂಗಳ **ರಾಗ: ಮಧ್ಯಮಾವತಿ, ಏಕತಾಳ**

ಕೇಸರಿ ತನಯಗೆ ಮಂಗಳ। ವಾನರೋತ್ತಮಗೆ ಮಂಗಳ॥ಪ॥ ರಾಮದೂತನಿಗೆ ಮಂಗಳ। ಸೀಮಾತೀತಗೆ ಮಂಗಳ। ವಜ್ರಕಾಯನಿಗೆ ಮಂಗಳ। ವಾಯುಪುತ್ರಗೆ ಮಂಗಳ॥1॥ ಭವ್ಯ ಮೂರುತಿಗೆ ಮಂಗಳ। ಬ್ರಹ್ಮ ತೇಜನಿಗೆ ಮಂಗಳ। ಭಕ್ತವತ್ಸಲಗೆ ಮಂಗಳ। ಭಜರಂಗ ಬಲಿಗೆ ಮಂಗಳ॥2॥ ದುಷ್ಟ ಶಿಕ್ಷಕಗೆ ಮಂಗಳ। ಶಿಷ್ಟ ರಕ್ಷಕಗೆ ಮಂಗಳ. ಸುಗ್ರೀವ ಸಖಿಗೆ ಮಂಗಳ। ಶಾರದೇನುತಗೆ ಮಂಗಳ॥3॥

ಶ್ರೀಕೃಷ್ಣ ಸ್ತುತಿ

ಕೃಷ್ಣನ ಬಾಲ್ಯ

ದೇವರನಾಮ

ಆನಂದಾಚ ಕಂದ ಹರಿಲಾ (ಮರಾಠಿ–ಅಭಂಗ) **ರಾಗ: ಭೀಮಫಲಾಸ್**

ಆನಂದಾಚ ಕಂದ ಹರಿಲಾ ದೇವಕಿನಂದನ ಪಾಹಿಲಾ॥ ಭಕ್ತಸಾಠಿ ಠೇವುನ ಕರಕಟಿ ಭೀಮಾನಿಕಟೀ ರಾಹಿಲಾ॥ ಕಂಸಭಯಾನೇ ವಸುದೇವಾನೇ ನಂದಯಶೋದೆ ವಾಹಿಲಾ॥ ಯಜ್ಞಯಾಗ ಜಪ ತಪಾಸಿ ನ ಭೂಲೇ। ಧ್ಯಾನ ಧಾರಣೆ ನಾಕಲೇ। ನಿಶ್ಚಯ ಸಾಚ ಪರಿ ತುಕಾಯಾ ಚ ಭಕ್ತಿ ಗುಣಾಸೀ ಮೋಹಿಲಾ॥

ಇವ ನೋಡಮ್ಮ ನವನೀತ ಚೋರ **ರಾಗ: ಕಮಾಚ್**

ಇವ ನೋಡಮ್ಮ ನವನೀತ ಚೋರ। ದೇವದೇವಮಾ ಮನೋಹರ॥ಪ॥ ಗೋವನೀವ ಗೋಪಾಲ ಶ್ರೀಧರ। ಗೋವಿಸುವ ಇವ ದಾಮೋದರ॥ಅ.ಪ.॥ ಬೆಣ್ಣೆ ಮೊಸರು ಕದ್ದು ಒಯ್ವನ। ಕಣ್ಣಲ್ಲಿ ಕಟ್ಟಬೇಕು ಇವನ। ಪುಣ್ಯವುಳ್ಳ ಯಶೋದೆ ಕಂದನ। ಬಣ್ಣಿಸೊ ಮಹೀಪತಿ ಗನುದಿನ॥1॥

ಎಲ್ಲಾಡಿ ಬಂದ್ಯೋ ನೀ **ರಾಗ: ರೇವತಿ**

ಎಲ್ಲಾಡಿ ಬಂದ್ಯೋ ನೀ ಹೇಳಯ್ಯಾ। ನಿಲ್ಲು ನಿಲ್ಲು ಗೋಪಾಲ ಕೃಷ್ಣಯ್ಯ ॥ಪ॥ ನೊಸಲಲ್ಲಿ ಕಿರುಬೆವರು ಇಟ್ಟಿದೆ ಅಲ್ಲಿ।

ಹೊಸಪರಿ ಸುದ್ದಿಯು ಹುಟ್ಟಿದೆ। ಪುಸಿಯಲ್ಲ ಈ ಮಾತು ಮುಟ್ಟಿದೆ। ನಿನ್ನ। ನಸುನಗೆಕೀರುತಿ ಹೆಚ್ಚಿದೆ॥1॥ ಬೆರಳ ಉಂಗುರವೆಲ್ಲಿ ಹೋಗಿದೆ। ನಿನ್ನ ಕೊರಳ ಪದಕವೆಲ್ಲಿ ನೀಗಿದೆ। ಸರಕೆಲ್ಲ ಅವಳಲ್ಲಿ ಸಾಗಿದೆ। ಆ ತರುಣಿ ಮಹಿಮೆ ಹೀಂಗಾಗಿದೆ॥2॥ ಕಳ್ಳತನವ ಹೇಗೆ ಮಾಡಿದೆ ನಿನ್ನ। ಸುಳ್ಳು ಕಡೆಗೆ ನಾ ನೋಡಿದೆ। ಎಲ್ಲರಿಗೂ ಠಕ್ಕು ಮಾಡಿದೆ। ಚೆಲುವ ರಂಗವಿಠಲ ನಗೆಗೀಡಾದೆ॥3॥

ಏನು ಮಾಡಲಿ ಈ ಮಗುವಿಗೇನಾಯಿತೋ ರಾಗ: ಹಿಂದೋಳ-ಛಾಪುತಾಳ

ಏನು ಮಾಡಲಿ ಈ ಮಗುವಿಗೇನಾಯಿತೋ ಇದ। ರಾಗಮ ಬಲ್ಲವರು ತಿಳಿದು ಹೇಳಿ॥ಪ॥ ಕಣ್ಣಮುಚ್ಚನು ಯಾರು ದೃಷ್ಟಿಗೊಂಡರೊ। ಮೊಲೆಯನುಣ್ಣನು ಇನ್ನಿರುಳು ಎರೆದ ನೀರು। ತಣ್ಣಗಾದುದೊ ಏನೊ ಘುರುಘುರೆನ್ನುತಲಿದೆ। ಚೆಣ್ಣನು ಆಯೆಂದ ಬಾಯ್ಮುಚ್ಚನಮ್ಮ॥1॥ ಖಂಡ ಸಕ್ಕರೆ ಬೆಣ್ಣೆ ಕೊಟ್ಟರೊಲ್ಲದೆ ಮಣ್ಣ। ಹೆಂಟೆ ಬೇಡುವನಮ್ಮ ಕೈಲೇನು ಕೊಡಲಿ। ಮಂಡೆ ಜಡೆಗಟ್ಟಿದೆ ಮಾಡಲಿದಕಿನ್ನೇನು। ಹಿಂಡು ಸತಿಯರ ದೃಷ್ಟಿ ಘನವಾಯಿತಮ್ಮ॥2॥ ಮೊಲೆಯುಂಬುವಾಗ ಮೈ ಮರೆವಾಗುತಿದೆಯೆಂದು। ಕಲಿಕಿತನದಲ್ಲೆನ್ನ ಕಾಡುತಾನೆ। ನೆಲೆಯ ಬಲ್ಲವರನ್ನು ಇಳೆಯೊಳೊಬ್ಬರ ಕಾಣೆ। ಚೆಲುವ ಶ್ರೀಪುರಂದರವಿಠಲನೆ ಬಲ್ಲ॥3॥

ಕುಣಿಕುಣಿಯೆಲೊ ಬಾಲಗೋಪಾಲ ರಾಗ: ಮೋಹನ

ಕುಣಿಕುಣಿಯೆಲೊ ಬಾಲಗೋಪಾಲ। ಗೋಪಾಲಾ ನೀರದ ಲೀಲಾ॥ಪ॥ ಯಮುನಾ ತೀರದಿ ಹಿಮಕಿರಣನು ತಾ। ಮಮತೆಯ ತೋರಲು ಬೆಳಗುತಿಹ। ಘಮಘಮಿಸುವ ಈ ಸುಮಗಳು ಸೂಸಿರೆ। ಪ್ರಮದೆಯರೆಲ್ಲರ ಪ್ರೇಮಾಂಗಣದಲೀ॥1॥ ಗಂಧವ ಮಾರುತ ಬೀರುತಲಿರುವನೂ। ಇಂದಿರೆ ಕೊರಳಿನ ರೂಪದಲೀ। ಚಂದದಿ ನಾದವು ತುಂಬಲು ಪರಮಾನಂದವು। ಮಾನಸ ಮಂದಿರದಲಿ ನೀ॥2॥ ಕಾಯವು ರೋಮಾಂಕಿತವಾಯ್ತೋ। ಮಾಯಾವಾದುವೋ ಮೋಹಗಳೂ। ತಾಯಮಡಿಲ ಸೇರಿದ ಶಿಶುವಂದದಿ। ಹಾಯವೆನಿಸಿತೋ ಜೀವನ ಯಾತ್ರೆಯು॥3॥ ನಾಟ್ಯವಾಡೋ ನೀ ನಾಟ್ಯವಾಡೋ। ಹೊಸ ನಾಟ್ಯವಾಡೋ ಹಸನಾದ ಮನದೀ। ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಬಿಡಿಸೋ। ಸ್ವಾಮಿ ನಿನ್ನ ಪಾದಯುಗಳವೆ ಕ್ಷೇಮಕರವೆನಿಸೋ॥4॥ ಸಾರಾಸಾರ ವಿವೇಕದ ಮೋಕ್ಷಕ್ಕೆ ಕೋರಿಕೆ ಪುಟ್ಟಿಸೋ। ಭಾರತೀರಮಣನ ಮಂಗಳ ಶಾಸ್ತ್ರ ವಿಚಾರಕೆ। ಇದು ಮೂಲ (2ಸಾರಿ) ಭಕುತಿ। ವರಪ್ರಸನ್ನ ಲಕುಮಿರಮಣ ಇನ್ನು। ತಕಿಟತಕಿಟ ಎಂದೂ॥5॥

ಕಂಡೆ ಕಂಡೆನೋ ಕೃಷ್ಣ ರಾಗ: ಕಲ್ಯಾಣಿ

ಕಂಡೆ ಕಂಡೆನೋ ಕೃಷ್ಣ ನಿನ್ನಯ ದಿವ್ಯಮಂಗಳ ಮೂರ್ತಿಯಾ। ಕಂಡು ಬದುಕಿದೆ ಇಂದು ಎನ್ನ ಕರುಣಿಸೋ ಎನ್ನೊಡೆಯನೆ॥ಪ॥ ಉಟ್ಟದಟ್ಟಿಯು ಪಿಡಿದಾವಂಕಿಯು। ತೊಟ್ಟಕೌಸ್ತುಭಭೂಷಣ॥ ಇಟ್ಟದಾನವರತ್ನದಾದಿಯು। ಇಟ್ಟಕಸ್ತೂರಿತಿಲಕನಾ॥ಮಂದಹಾಸದಂತಪಂಕ್ತಿಯು। ಚೆಂದದಾಕುಡಿನೋಟವೂ॥1॥ ಅಂದ ಪಾದಕುರುಳುಕೂದಲು। ಮುದ್ದುಸುರಿಯುವ। ಮುಖವನಾ॥ ಮಲ್ಲೆಮಲ್ಲಿಗೆದಂಡೆ ಕೊರಳೊಳು। ಚೆಲ್ವ ಕಂಕಣಕೈಯೊಳು। ಗೊಲ್ಲಸತಿಯರ ಕೂಡೆ ಆಡುತಾ।ಗಲ್ಲುಗಲ್ಲೆಂದು ನಲಿವೋನಾ॥2॥ ಇಂದು ಎನ್ನಯ ಬಂಧ ತೀರಿತು। ಮುನ್ನ ಕ್ಲೇಶವು ಹೋಯಿತು। ಅನ್ಯರಾನೆರೆಭಜಿಸಲಾರೆನೋ। ಮನ್ನಿಸೊ ಹಯವದನನೇ। ಸುರರು ಪುಷ್ಪದ ವೃಷ್ಟಿ ಕರೆಯಲು। ಅಸುರರೆಲ್ಲರೂ ಓಡಲು ಕ್ರೂರಕಾಳಿಯ ಫಣೆಯೊಳಾಡಿ। ಧೀರನಲಿನಲಿದಾಡುವವನಾ॥3॥

ಘಲ್ಲು ಘಲ್ಲೆನೆರಾ ಗಂತುಲಡಚು

ಘಲ್ಲು ಘಲ್ಲೆನೆರಾ। ಗಂತುಲಡಚು। ನಂದಕುಮಾರ। ಜಗದೇಕ ಮೋಹನಾಕಾರ। ಗೋಪಕಿಶೋರ॥ಪ॥ ಮನ್ನೇಲಕಿಂಟಿ ಪೋಯಿನಾ ಚಿನ್ನಿಕನ್ನಯ್ಯ। ನಿನ್ನೇ ಮನಂದು ನೋಯಿನಾ ಮುದ್ದು ಕೃಷ್ಣಯ್ಯ। ಪೊರಗಿಂಡ್ಲಕೇಲ ಪೋಯದುರ ಅಲ್ಲರಿವಾಡ ಕಿದುವಾ ಮನಿಂಟಿ ಪಾಲು ಪೆರಗು ವೆನ್ನಯುಟಂದಾ॥1॥ ನೀ ಮೋಮುವಾಡಿ ಪೋಯನಿಯ ಇಂಟಿಕಿ

ರಾಮ। ನಾ ಮಾಟ ವಿನವಾ ಮರಿನಿ ಆಟ ಮಾನವ। ಇಕಲಾಲ ಪೋಸು ಕೊಂದುವುರ ಬಾಲ ಗೋಪಾಲ। ವಿನರಾ ವಿನರಾ ಜಗದೇಕ ಮೋಹನಾಕಾರ ಗೋಪ ಕಿಶೋರ॥2॥

ಭಕ್ತಿಗೀತೆ

ಆಡಿ ಬಾರೋ ಕೃಷ್ಣ ಓಡಿ ರಾಗ: ಮಾಂಡ್

ಆಡಿ ಬಾರೋ ಕೃಷ್ಣ ಓಡಿ ಬಾರೋ। ಆಡುತ್ತ ಗೆಳೆಯರೊಡನೆ ಕೂಡಿ ಬಾರೋ। ಆಡಿ ಬಾ ಆಡಿ ಬಾ ಆಡಿ ಬಾರೋ॥ಪ॥ ಕಾಲಲಂದುಗೆ ಗೆಜ್ಜೆ ಘಲುಘಲುರೆನುತಲಿ। ನಾದವ ಬೀರುತ ನೀ ಬಾರೋ॥1॥ ಚಿನ್ನಿ ಕೋಲು ಚೆಂಡು ಬುಗುರಿಗಳನ್ನಾಡುತ। ಗೋಪಿಯರೊಡಗೂಡಿ ಬಾರೋ॥2॥ ತಾಯಿಗೆ ಬಾಯಲ್ಲಿ ಜಗವನ್ನೇ ತೋರಿದ। ನೀ ಮಾಯಾ ಮಹಾ ಪುರುಷನಹುದೋ॥3॥

ಎಂಥ ಚೆಲುವ ನಮ್ಮ ಕೃಷ್ಣ ರಾಗ: ಭೌಳಿ

ಎಂಥ ಚೆಲುವ ನಮ್ಮ ಕೃಷ್ಣ ಇಂಥ ಇಂಥ ಚೆಲುವ ಮೂರ್ತಿಯ ಬೇರೆಲ್ಲೂ ಕಾಣೆನಮ್ಮ॥ಪ॥ ಕಾಲಲ್ಲಿ ಕಿರುಗೆಜ್ಜೆ ಘಲು ಘಲು ಎನ್ನಲು। ನಡುವಿನ ನಡುಗೆಜ್ಜೆ ಧಣ ಧಣ ರೆನ್ನಲು। ಮಂದಹಾಸ ಬೀರಿ ಕುಳಿತಿರುವ ಕೃಷ್ಣ ॥1॥ ಕಡಗ ಕಂಕಣ ಕೈಬಳೆ ಝುಣಝುಣರೆನ್ನಲು। ಬೆಣ್ಣೆ ಉಂಡೆಯ ಕೈಯಲ್ಲಿ ಪಿಡಿದು ಕುಳಿತಿರುವ ಕೃಷ್ಣ। ಮೇಲಾಗಿ ತುಳಸಿ ಮಾಲೆಯ ಧರಿಸಿರುವ ಕೃಷ್ಣ। ॥2॥ ಮುತ್ತಿನ ಕವಚವ ತೊಟ್ಟು ಮುತ್ತಿನ ಆಭರಣಗಳನ್ನು ಧರಿಸಿ। ಮಲ್ಲೆ ಮಲ್ಲಿಗೆ ಜಾಜಿ ಪುಷ್ಪಗಳ ಹಾರದಿಂದ ಶೋಭಿಸುವ ಕೃಷ್ಣ॥3॥ ಅರಳೆಲೆ ಮಾಂಗಾಯಿ ಕರ್ಣದಲಿ ಓಲಾಡುತಿರಲು। ಚಂಪಕ ಪೋಲುವ ನಾಸಿಕ ಹಾಲುಗೆನ್ನೆಯ। ಹಸುಳೆ ಚೆಂದುಟಿಯ ಚೆಲುವ ನಮ್ಮ ಕೃಷ್ಣ॥4॥ ಫಣೆಯಲ್ಲಿ ಕುಂಕುಮ ಕುಸ್ತೂರಿ ತಿಲಕ। ಮುಡಿಯಲ್ಲಿ ಮಲ್ಲಿಗೆ ದಂಡೆ ಮುಡಿದು। ನವಿಲು ಗರಿಯಿಂದ ಅಲಂಕರಿಸಿಕೊಂಡಿರುವ ಕೃಷ್ಣ॥5॥ ಭಕ್ತರಾ ಮೊರೆ ಕೇಳಿ ಅಂಬೆಗಾಲನ್ನಿಕ್ಕುತ ಬಂದು। ಅಪ್ರಮೇಯನ ಸನಿಹದಲ್ಲಿ। ಕುಳಿತಿರುವ ಮಳೂರು ನವನೀತ ಕೃಷ್ಣ॥6॥

ಎನ್ನ ತವಂ ಸೈದೆನ್ನೈ (ತಮಿಳು) ರಾಗ: ಕಾಪಿ

ಎನ್ನ ತವಂ ಸೈದೆನ್ನೈ ಯಶೋದ। ಎಂಗುಂನಿರೈ ಪರಬ್ರಹ್ಮಂ ಅಮ್ಮಾ ಎನ್ರಳೈಕ್ಕ॥ಪ॥ ಈರೇಳು ಭುವನಂಗಳ್ ಪಡೈತ್ತವನ್ನೈ। ಕೈಯಿಲ್ ಏಂದಿ ಪಾಲೂಟ್ಟಿ ಸೀರಾಟ್ಟಿ ತಾಲಾಟ್ಟ॥ಅ.ಪ॥ ಬ್ರಹ್ಮನುಂ ಇಂದ್ರನುಂ ಮನದಿಲ್ ಪೊರಾಮೈಕೊಳ್ಳ। ಉರಳಿಲ್‌ಕಟ್ಟಿ ವಾಯ್‌ಪೊತ್ತಿ ಕೆಂಜವೈತ್ತಾಯ್ ಕಣ್ಣನೆ ತಾಯೆ॥ ಸನಕಾದಿಯಾರ್ ತವಯೋಗ ಸೈದು ವರುಂದಿ ಸಾದಿತ್ತದೈ॥ಚರಣ॥

ಎಷ್ಟು ಜನ್ಮದಲಿ ಮಾಡಿದ್ದಳೋ ಗೋಪಿ

ಎಷ್ಟು ಜನ್ಮದಲಿ ಮಾಡಿದ್ದಳೋ ಗೋಪಿ ಶ್ರೀಕೃಷ್ಣನಾ ಲೀಲೆಯನು ನೆನೆದು ಹಿಗ್ಗುವ ಸುಕೃತ॥ಪ॥ ಅಂಬುರುಹನಾಭನಿಗೆ ತರಳೆಯಲಂಕರಿಸಿ। ತುಂಬೆ ಗುರುಳಿಗೆ ಸುತ್ತ ಜಡೆಯನ್ನು ಹಣೆದು। ಸಂಭ್ರಮದಿ ಚಂಡಿಕೆಗೆ ಸರಸ ಮಲ್ಲಿಗೆ ಸುತ್ತಿ। ಚುಂಬಿಸುತ ನಗಿಸಿ ಮುದ್ದಾಡುವ ಸುಕೃತ॥1॥ ಮದನ ಜನಕನಿಗೆ ಮಾಗಾಯಿ ಬಾವುಲಿಯಿಟ್ಟು। ಪದಕ ವೈಜಯಂತಿಯನೆ ಕೊರಳಿಗ್ಹಾಕಿ। ಮುದದಿ ಕೌಸ್ತುಭ ತುಲಸಿವನಮಾಲೆಯನು ಧರಿಸಿ। ಪದುಮನಾಭನ ಪಾಡಿ ಪೊಗಳುವಾ ಸುಕೃತ॥2॥ ಕಸ್ತೂರಿಯಿಟ್ಟು ಕಂಗಳಿಗೆ ಕಾಡಿಗೆ ಹಚ್ಚಿ। ಮತ್ತೆ ಕದಪಿನಲಿ ಕುಂಕುಮವನೊತ್ತಿ। ಮುತ್ತಿನಂದದೊಳಿರುವ ಬೆವರ ಸೆರಗಿನೊಳೊರಸಿ। ಮುತ್ತು ತಾರೈ ಎಂದು ಮುದ್ದಾಡುವಾ ಸುಕೃತ॥3॥ ಅಸುರಕುಲ ಹರಣನಿಗೆ ಅಂಗಿಯನು ತೊಡಿಸಿ। ಬಲು ಕುಶಲದಿಂ ಪೀತಾಂಬರವನ್ನು ಉಡಿಸಿ। ಪೊಸ ರತುನ ಬಿಗಿದ ಮಣಿ ಮಯದ ಮುಕುಟವ। ಮಂಡೆಗೊಸವಿಟ್ಟು ನಲಿನಲಿದು ಮುದ್ದಾಡುವಾ ಸುಕೃತ॥4॥ ಶಂಖಚಕ್ರಾಂಕಿತಗೆ

ಭುಜಕೀರ್ತಿಯನೆ ಧರಿಸಿ ಅಲಂಕಾರದಲಿ ತಾರೆ ಮಣಿಯ ಕಟ್ಟಿ। ಕಂಕಣವು ಕಡಗ ಥಳಥಳಿಪ ಪವಳದಿ ರಚಿಸಿ ಬಿಂಕದಲ್ಲಿ ತೊಟ್ಟಿಲೊಳಗಿಟ್ಟು ತೂಗುವ ಸುಕೃತ॥5॥

ಐಂಜಿಲೆ ಏಂದುರುಂದು ಯಶೋದ (ತಮಿಳು) — ರಾಗ: ಮಾಂಡ್

ಐಂಜಿಲೆ ಏಂದುರುಂದು ಏಂಜಿಲೆ ತೈರ್ ಕಡಂಜು ಪಂಜು ಪೋಲೆ ಐಂದು ದೋಸೈ।ವಾತ್ತು। ಐಂಜು ದೋಸೆ ವೆಚ್ಚು। ಅದರ ಮೇಲ್ ನೈ ವೆಚ್ಚು। ಶುಡುಶುಡನೆ ದೋಸೈ ಕುಡಪ್ಪೇಂಸ್ವಾಮಿ ಕಾಕಾಕಾಕಾ ಎನ್ನಟ್ಟುಂ॥ ಕಾಕಾಕಾಕಾ ಎನ್ನಟ್ಟುಂಕೃಷ್ಣ ಪೋದುದಯ ಮಾಡು ವರುಟ್ಟುರಂಗಾ ಪೂವರಳಿವರಟ್ಟುಂ ಮಯ್ಯಾ॥1॥ ಕಳೈಕಾಯಿ ವೆಚ್ಚು। ಕಾಲಂಬರೆ ಪಶಿಕ್ಕಿರದೆನ್ರು ಶುಡುಶುಡನೆ ದೋಸೈ ವೆಚ್ಚೀ ನೀಲವಣ್ಣಾ ನೀಲಮಯ್ಯಾ ನೀ ಸಂಡೈ ಪೋಡ ವೇಂಡಾ ಅಣ್ಣನ್ ಕೂಡೈ। ದೋಸೈ ಕುಡುಪ್ಪೇಂ ಸ್ವಾಮಿ ಕಾಕಾಕಾಕಾ ಎನ್ನಟ್ಟುಂರಂಗಾ॥2॥ ಆಲೆಲೈ ಮೇಲೆ ಪಡುತ್ತಿರುಂದ ಅಚ್ಚುತಾನಂತ ಏಂದಿರುಂದಾ। ಬಾಲವಂದ ಪಿನ್ನೈ ನಾನಪ್ಪೊ ಏಂದಿರುಂದೋ। ಸೋನೇಲೆ ಏಂದಿರುಂದು ಶುರುಕ್ಕ ಅರಳಿ ಪೂಪರುಚ್ಚೀ ಒರುಮಾಲೈ ಕಟ್ಟಿ। ಒರು ದೋಸೈ ಕುಡುಪ್ಪೇನ್ ಸ್ವಾಮಿ ಕಾಕಾಕಾಕಾ ಎನ್ನಟ್ಟುಂ॥3॥

ಓಡೋಡಿ ಬಂದನೆ ಗೋಪಿಯ ಕಂದನೆ — ರಾಗ: ಬೃಂದಾವನಸಾರಂಗ

ಓಡೋಡಿ ಬಂದನೆ ಗೋಪಿಯ ಕಂದನೆ ಗೆಜ್ಜೆಯ ಪಾದನಾದ ಘಲ್ ಘಲೀರ್ ಧ್ವನಿ॥ಪ॥ ಕೊಳಲಾ ಗೋಪಾಲನೆ ಕೌಸ್ತುಭಧಾರನೆ। ಕಾಡಿದನೆ ಬೆಣ್ಣೆ ಬೇಡಿದನೆ। ಕಣ್ಣಾ ಶ್ರೀಕೃಷ್ಣನ ಕಾಟವ ಸಹಿಸೆನೆ ಗೋಪಿ ನೀ ಬುದ್ಧಿ ಪೇಳೆ ಬೇಗ ಬೇಗನೆ॥1॥ ಮೆಲ್ಲ ಮೆಲ್ಲಾನೆ ಗೊಲ್ಲಾರ ಕರೆದನೆ। ಬೆಣ್ಣೆಯ ಬೇಕೆ ಬನ್ನಿ ಎಂದ। ಬೆಣ್ಣೆಯ ಕದ್ದನೇ ತಿಂಡಿಯ ಮೆದ್ದನೆ। ಸದ್ದು ಮಾಡದೆ ಓಡಿ ಪೋದನೆ ॥2॥

ಓಹೋ ಓಹೋ ತೈರ್‌ಕೊಡಮೆ ಒಡೆಂಜು (ತಮಿಳು) — ರಾಗ: ಶಂಕರಾಭರಣ(ನೋಟ್)

ಓಹೋ ಓಹೋ ತೈರ್‌ಕೊಡಮೆ ಒಡೆಂಜು ಪೋಚುದೆ ಒಡೆಂಜುಪೋಚುದೆ ಕೃಷ್ಣ ಉನ್ನಾಲ್ ಆನದೇ॥ಪ॥ ನಾತ್‌ನಾರುಂಎನ್ನೈ ಕಂಡಾಲ್ ನಾಕು ಕಾಟ್ಟುವಳ್। ನಾಕು ಕಾಟ್ಟುವಳ್ ಕೃಷ್ಣ ನಯ್ಯಾಂಡಿಶೈವಳ್॥1॥ ಕೊಳಂದನಾರುಂ ಎನ್ನೈ ಕಂಡಾಲ್ ಕೋಳ್ ಮೂಟ್ಟುವರ್। ಕೋಳ್ ಮೂಟ್ಟುವರ್ ಕೃಷ್ಣ ಕುತ್ತಿಕಾಟ್ಟುವರ್॥2॥ ಆತ್‌ಕಾರುಂಎನ್ನೈ ಕಂಡಾಲ್ ಅದಟ್ಟಿ ಮೆರಟ್ಟುವರ್। ಅದಟ್ಟಿ ಮೆರಟ್ಟುವರ್ ಕೃಷ್ಣ ಅಡಿಚ್ಚಿ ನೊರುಕ್ಕುವರ್॥3॥ ಮಾಮಿಯಾರುಂ ಎನ್ನೈಕಂಡಾಲ್ ಪೆರಾಟಿವಿಡುವರ್। ಮಾಟ್ಟಿವಿಡುವರು ಕೃಷ್ಣಮರಕ್ಕಾಮಲ್ ಸೊಲ್ವರ್॥4॥ ಮಾಮನಾರುಂ ಎನ್ನೈಕಂಡಾಲ್ ತಿರುಂಬಿ ಪೇಸುವರ್। ತಿರುಂಬಿ ಪೇಸುವರ್ ಕೃಷ್ಣತಕರಾರು ಪಣ್ಣುವರ್॥5॥ ಓರ್ಪಡಿಯುಂ ಎನ್ನೈಕಂಡಾಲ್ ಓರಂ ಕಟ್ಟುವಳ್। ಓರಂ ಕಟ್ಟುವಳ್ ಕೃಷ್ಣ ಒದುಕ್ಕಿಯೇ ವೈಪಳ್॥6॥

ಓಹೋ ಓಹೋ ಮೊಸರು ಗಡಿಗೆ ಒಡೆದು (ಮೇಲಿನ ಹಾಡಿನ ಅನುವಾದ)

ಓಹೋ ಓಹೋ ಮೊಸರು ಗಡಿಗೆ ಒಡೆದು ಹೋಯಿತು। ಒಡೆದು ಹೋಯಿತಲ್ಲೋ ಕೃಷ್ಣ ನಿನ್ನಿಂದಾದುದೋ॥ಪ॥ ನಾದಿನಿಯು ನನ್ನ ಕಂಡರೆ ಜೋರು ಮಾಡ್ವಳೋ। ಜೋರು ಮಾಡ್ವಳೋ ಕೃಷ್ಣ ಜರಿದುಬಿಡುವಳೋ॥1॥ ಮೈದುನರು ನನ್ನ ಕಂಡರೆ ಚಾಡಿ ಹೇಳ್ವರೋ। ಚಾಡಿ ಹೇಳ್ವರೋ ಕೃಷ್ಣ ಚುಚ್ಚುತ್ತಿರುವರೋ॥2॥ ಗಂಡನನ್ನ ಕಂಡರೆ ಗದರಿಬಿಡುವನು। ಗದರಿ ಬಿಡುವರೋ ಕೃಷ್ಣ ಗುದ್ದಿಬಿಡುವರೋ॥3॥ ಅತ್ತೆ ಎನ್ನ ಕಂಡರೆ ಹತ್ತಿಸಿ ಬಿಡುವಳೋ। ಹತ್ತಿಸಿಬಿಡುವಳೋ ಕೃಷ್ಣ ಹೆಚ್ಚಿಸಿ ಹೇಳ್ವಳೋ॥4॥ ಮಾವ ನನ್ನ ಕಂಡರೆ ತಿರುಗಿ ಬೀಳ್ವರೋ ತಿರುಗಿ ಬಿಳ್ವರೋ ಕೃಷ್ಣ ತಕರಾರು ಮಾಡ್ವರೋ॥5॥ ಓರಗಿತ್ತಿಯು ನನ್ನ ಕಂಡರೆ ಓಟ ಕೀಳ್ವಳೋ। ಓಟ ಕೀಳ್ವಳೋ ಕೃಷ್ಣ ಒಗಟಾಗಿ ನೋಡ್ವಳೋ॥6॥ ಭಾವ ನನ್ನ ಕಂಡರೆ ಬಾಯಿ ಮಾಡ್ವರೋ। ಬಾಯಿ ಮಾಡ್ವರೋ ಕೃಷ್ಣ ಬೈಯ್ಯುತ್ತಿರುವರೋ ॥7॥

ಕಿಂಕಿಣಿ ನಾದಂ ಘಲ್ ಘಲ್ (ತಮಿಳು) **ರಾಗ: ಮಾಂಡ್**

ಕಿಂಕಿಣಿ ನಾದಂ ಘಲ್ ಘಲ್ಎನ್ರೊಳಿತ್ತಿಡ। ಕಣ್ಣನ್ ನಡಮಿಡುವಾನ್।।ಪ।। ಮಯಿಲ್ ಪೀಲಿ ಅಸೈಂದಿಡ ಮಾಲೈ ಅಸೈಂದಿಡ।। ಕಾಳಿಂಗ ನರ್ತನಮ್ ಆಡಿಕೊಂಡು। ವಣ್ಣ ಕಣ್ಣನ್ ನಡಮಿಡುವಾನ್। ಕಾವಿಯ ಚೋಲೆಯಿಲ್ ಗೋಪಿಯರುಡನೆ ನಡಮಿಡುವಾನ್।।1।।

ಕುಳಂದೆಯಾಗ ಮೀಂಡುಂ (ತಮಿಳು) **ರಾಗ: ಷಣ್ಮುಖಪ್ರಿಯ**

ಕುಳಂದೆಯಾಗ ಮೀಂಡುಂ ಕಣ್ಣನ್ ಪಿರಕ್ಕಮಾಟ್ಟಾನಾ? ಪುಳ್ಳಾಂಗೊಳಲ್ ಊದಿ ಎನ್ನೈ ಮಯಕ್ಕಮಾಟ್ಟಾನಾ? ಮಾಡುಕನ್ರೈ ಕಾಟ್ಟಿಲ್ ಓಟ್ಟಿ ಮೇಯ್ಕಮಾಟ್ಟಾನಾ? ಅಂಗೆ ಓಡಿಯಾಡಿ ಎನ್ನೈ ಕೂಟ್ಟು ಸೇರ್ಕಮಾಟ್ಟಾನಾ?।।1।। ಚಿನ್ನಂಚಿರು ವಾಯ್ಕೈಕೊಂಚಂ ತಿರುಕ್ಕಮಾಟ್ಟಾನಾ? ಎನ್ ಕಣ್ಣಿರ್ಕು ಇಂದ ಉಲಗಂ ಮುಳುದುಂ ಕಾಟ್ಟಮಾಟ್ಟಾನಾ? ಎನ್ನೈ ಅವನ್ ತೋಳನಾಗ ಏರ್ಕಮಾಟ್ಟಾನಾ? ದಿನಮುಂ ವೆಣ್ಣೆಯಿಲ್ಲೈ ಪಂಗು ಪೋಟ್ಟು ತರವುಂ ಮಾಟ್ಟಾನಾ? ।।2।। ಮಲೆಯೈ ಎಡುತ್ತು ಕೊಡೆಯೈ ಪೋಲ್ ಪಿಡಿಕ್ಕಮಾಟ್ಟಾನಾ? ಎನ್ ತಲೆಯಿಲ್ ಮಳೈ ವಿಳುವದೆಯುಂ ತಡುಕ್ಕಮಾಟ್ಟಾನಾ? ಗೀತೈ ತನ್ನೈ ತಿರುಂಬ ಅವನ್ ಕೂರ ಮಾಟ್ಟಾನಾ? ಅದೈ ಕಾದಿಲ್ ಪೋಟ್ಟು ಸಿರಂದವನಾಯ್ ಮಾರಮಾಟ್ಟಾನಾ?।।3।।

ಕೃಷ್ಣ ಕಾಡಿದನು ಅಮ್ಮಾ **ರಾಗ: ಕಾಪಿ**

ಕೃಷ್ಣ: ಕೃಷ್ಣ ಕಾಡಿದನು ಅಮ್ಮಾ ಅಮ್ಮಾ। ತಾಯಿ ಕೇಳಿದಳು ಏನು ಮಗು। ಅಣ್ಣ ಬಲರಾಮನಿಗೆ ನಿನ್ನೆ ರಾತ್ರಿ ನೀ ಏನ ಕೊಟ್ಟೆ ಅದ ಕೊಡು ನನಗೂ **ಯಶೋದ:** ಅಣ್ಣ ಬಲರಾಮನಿಗೆ ನಿನ್ನ ರಾತ್ರೆ ಏನ ಕೊಟ್ಟೆ ಕಣ್ಣಾ। ಕರೆದ ಹಾಲ ನೀ ಕೊಟ್ಟೆಯಂತೆ ನೊರೆ ಚಂದ್ರನಂತ ಬಣ್ಣ। ಕರೆದ ಹಾಲೆ ಓ ನಿನಗೂ ಕೊಡುವೆ ಹಸು ಮನೆಗೆ ಬರಲಿ ತಾಳು। ಮನೆಗೆ ಬಂದ ಹಸು ಮೇವು ಮೆಲುಕುತಿದೆ ಗೊಲ್ಲ ಬಂದಕೇಳುऽऽ ಯಶೋಧ **ಕೃಷ್ಣ:** ಗೊಲ್ಲ ಬಂದರೇನ್ ಎಲ್ಲ ಗೋವುಗಳು ಮೇವು ಮೆಲುಕಲೇಳು। ಸಂಜೆಗಾಗಲೇ ಏನು ಹಾಲು ತಡಿ ರಾತ್ರಿಯಾಗಲೇಳು। ಕೃಷ್ಣ ರಾತ್ರಿ ಎಂದರೇನಮ್ಮ ರಾತ್ರಿಯದು ಗುರುತು ಹಿಡಿವುದೆಂತು। **ಯಶೋದ:** ರಾತ್ರಿ ಎಂದರದು ಕಾಳಕತ್ತಲೆ ಕಣ್ಣೆ ಕಾಣದಂತುऽऽ। ಕೃಷ್ಣ **ಯಶೋದ:** ಕೃಷ್ಣನಾಗ ಕಣ್ಣ್ ಮುಚ್ಚಿ ಬಿಗಿದುದು ಕತ್ತಲಾಯಿತಮ್ಮಾ। ಕಣ್ಣೆ ಕಾಣದು ಹಾಲು ಕರೆದು ತಾ ರಾತ್ರಿಯಾಯಿತಮ್ಮಾ। "ಎಂದು ಕಾಡಲಾತಾಯಿಯಶೋದ ನಕ್ಕು ನಟಿಕೆ ಮುರಿದು"। "ಕರೆದು ತಂದಳು ಹೊನ್ನ ಬಟ್ಟಲಲಿ ನೊರೆಯಹಾಲಸುರಿದು"। ಕೃಷ್ಣ ಕುಡಿದನಾ ನೊರೆಯ ಹಾಲನವ ಎಳೆಯ ತುಟಿಯ ಸುತ್ತ। ಹೊಳೆದು ಹರಡಿದ ನಗೆಗೆ ನೀಗಲಿ ನಮ್ಮ ನಿಮ್ಮ ಕುತ್ತು।।ಕೃಷ್ಣ।।

ಗೋಪಾಲಕೃಷ್ಣ ಬಾರೋ **ರಾಗ:ಭೈರವಿ**

ಗೋಪಾಲಕೃಷ್ಣ ಬಾರೋ। ಗೋವಿಂದವಿಠಲ ಬಾರೋ। ಗೋವರ್ಧನಾನೆ ಬಾರೋ ಗೋವಿಂದವಿಠಲ ಬಾರೋ।।ಪ।। ಗೊಲ್ಲಾರ ಮನೆಯಪೊಕ್ಕು। ಚೆಲ್ಲಿಪ ಮೊಸರನೆಲ್ಲಾ। ಕಳ್ಳಾತನವ ಮಾಡಿ। ಸಲ್ಲೀಸಿದಂಥಧೀರಾ।।1।। ಕಾಳಿಂಗ ಮಡುವ ಧುಮುಕಿ। ಕಲಕೆಲ್ಲ ಮಡುವ ನೀನು। ಕಾಳಿಂಗನ್ಹೆಡೆಯತುಳಿದು। ಧುಮುಕೆಂದು ಕುಣಿದಧೀರಾ।।2।। ನೀರೋಳು ನಿಂತು ನಾರಿಯರೂ ನೀರಾಟವಾಡುತಿರಲು। ಸೀರೇಗಳನೆಕದ್ದು। ನೃತ್ಯಾವನಾಡಿದ ಧೀರಾ।।3।। ಗೋಪಾಲಕೃಷ್ಣ ಬಾರೋ। ಗೋವಿಂದ ವಿಠಲ ಬಾರೋ।ಗೋವರ್ಧನಾನೆ ಬಾರೋ। ಗೋವಿಂದವಿಠಲ ಬಾರೋ।।4।।

ಚಿನ್ನಿ ಕೃಷ್ಣ ಮುದ್ದು ಕೃಷ್ಣ **ರಾಗ: ಮುಖಾರಿ**

ಚಿನ್ನಿ ಕೃಷ್ಣ ಮುದ್ದು ಕೃಷ್ಣ ವೆನ್ನಲ ಕೃಷ್ಣ। ನೀ ಗೋವುಲನು ಮರಲು ಕೊನಿ ವೇಗಮೆ ರಾವಾ।।ಪ।। ಗೊಲ್ಲಭಾಮಲಂದರು ಕೂಡಿ ಚೆಲ್ಲರಾಯಗ। ನೀ ಗೋವುಲನು ಮರಲುಕೊನಿ ವೇಗಮೆ ರಾವಾ।।ಅ.ಪ.।। ಆಶತೋನು ಭೂತುಲನು ಚಂಪಿನವಾಡ ಆ ಶಕಟಾಸುರನ ಕಾಲು ತೊನ್ನಿನವಾಡ। ನೀ ಗೋವುಲನು ಮರಲುಕೊನಿ ವೇಗಮೆ ರಾವಾ।।1।।

ನವನೀತ ಚೋರ ನಾರಿ ಚೋರ ನಂದ ಕಂದನಾ ಚಿರ ಪಾಂಡವಲನು ಚಿರುಗುಂಚಿನ। ಚಿನ್ನಿ ಕೃಷ್ಣಯ್ಯ ನೀ ಗೋವುಲನು ಮರಲುಕೋನಿ ವೇಗಮೆ ರಾವಾ।।2।। ಪುಟ್ಟಿಮಿಂದ ಪಾಲ್ ಮೀಗಡ ತಿನ್ನಿನ ವಾಡ ನೀ ನವತಾರ ಪುರುಷುಡೈ। ನ ನದರಿಂಚಿ ಜನ್ಮಿಂಚಿನ ವಾಡ। ನೀ ಗೋವುಲನು ಮರಲುಕೊನಿ ವೇಗಮೆ ರಾವಾ।।3।।

ಚೆಲುವರಲ್ಲಿ ಚೆಲುವನಮ್ಮ — ರಾಗ: ಜುಂಜೋಟಿ

ಚೆಲುವರಲ್ಲಿ ಚೆಲುವನಮ್ಮ ತುಂಟ ಕೃಷ್ಣನು। ಪಿಳ್ಳಂಗೋವಿ ಊದಿ ಬರುವ ಮುದ್ದು ಕೃಷ್ಣನು ನಮ್ಮ ತುಂಟ ಕೃಷ್ಣನು।।ಪ।। ಚೆಂಡನಾಡಿ ಪಾಲಕೊಡವನೊಡೆವನು। ಜಿಂಕೆ ಏರಿ ಬಾಯಿ ತುಂಬ ಬೆಣ್ಣೆ ಮೆದ್ದನು।।ಅ.ಪ।। ಸೀರೆ ಕದ್ದನು ಕೃಷ್ಣ ಜಾರಿ ಬಿದ್ದಾನು। ಸೀರೆ ಕದ್ದು ಮರದ ಮೇಲೆ ಮಾಯವಾದನು।। ಕಲ್ಲು ಹೊಡೆದನು ಕೃಷ್ಣ ಗುಲ್ಲು ಮಾಡ್ಯಾನು। ಗುಲ್ಲು ಮಾಡಿ ಗೋಪಮ್ಮಗೆ ದೂರುತಂದ್ಯಾನು।।1।। ಮೊಸರು ಕದ್ದಾನು ಕೃಷ್ಣ ಹಾಲು ಕದ್ದಾನು। ಹಾಲು ಮೊಸರು ಕದ್ದು ನಾರಿಯ ಗೋಳು ಹೊಯ್ದಾನೊ।। ಪೂತನಿಯ ಕೊಂದ ಕೃಷ್ಣ ಜಗವ ತೋರ್ಯಾನು ಗೋವರ್ಧನ ಗಿರಿ ಎತ್ತಿ ಲೀಲೆ ತೋರ್ಯಾನು।।2।। ಸಾರಥಿಯಾದ್ಯಾನೂ ಕೃಷ್ಣ ನೀತಿಯ ಮೆರೆಸಿ। ಧರ್ಮಯುದ್ಧ ನಡೆಸಿ ತಾನು ನೀತಿ ಬೋಧಿಸಿ। ಹತ್ತವತಾರವೆತ್ಯಾನು ಕೃಷ್ಣ ತಾರೆಯಾದನು। ಅವತಾರಕೊಂದು ಮಹಿಮೆಯನ್ನು ತೋರಿ ಮೆರೆದ್ಯಾನು।।3।।

ತಾಯೇ ಯಶೋದ ಉನ್‌ದನ್ (ತಮಿಳು) — ರಾಗ: ತೋಡಿ, ಆದಿತಾಳ

ತಾಯೇ ಯಶೋದ ಉನ್‌ದನ್ ಆಯರ್ ಕುಲತ್ತಿಲ್ ಉದಿತ್ತ। ಮಾಯನ್ ಗೋಪಾಲಕೃಷ್ಣನ್ ಸೈಯುಂ ಜಾಲತ್ತೈ ಕೇಳಡಿ।।ಪ।। ತೈಯಲೇ ಕೇಳಡಿ ಉನ್‌ದನ್ ಪೈಯನ್ನೈ ಪೋಲವೇ ಇಂದ। ವೈಯಗತ್ತಿಲ್ ಒರುಪಿಳ್ಳೈ ಅಮ್ಮಮ್ಮನಾನ್ ಕಂಡದಿಲ್ಲೈ।।1।। ಕಾಲಿನಿಲ್ ಸಿಲಂಬು ಕೊಂಜ ಕೈವಳ್ಳೈ ಕುಲಂಗ। ಮುತ್ತು ಮಾಲೈಗಳ್ ಅಸೆಯ ತೆರುವಾಸಲಿಲ್ ವಂದಾನ್।।2।। ಮಾನವರೆಲ್ಲಾಂ ಮಗ್ಗಿಳಾ ಮಾನಿದರೆಲ್ಲಾಂ ಪುಗಳಾ। ನೀಲಮೇಘ ಕಣ್ಣನ್ ಅವನ್ ನರ್ತನಂ ಆಡಿನಾಂಡಿ।।3।। ಬಾಲನ್ ಎನ್ರು ತಾವಿಅಣೈತ್ತೇನ್ ಅಣೈತ್ತ ಎನ್ನೈ। ಮಾಲೆ ಇಟ್ಟವನ್ ಪೋಲ್ ವಾಯಿಲ್ ಮುತ್ತಂ ಇಟ್ಟಾನಡಿ।।4।। ಪಂದಲಸೈಯ ವಾಯಿಲುಂ ವೆಣ್ಣೈ ತಂದಾಲ್ ಉನ್ನೈ ವಿಡುವೇನ್ ಎನ್ರು। ಮುಂದಿಸೀಲೈ ತೊಟ್ಟುಳಿತ್ತು ಪೋರಾಡಿನಾನ್ ಬಾಲನಲ್ಲಡಿ ಉನ್‌ಮಗನ್।।5।।

ನಾನೆಂತು ವರ್ಣಿಸಲಿ ಕೃಷ್ಣನ್ನ — ರಾಗ: ಕಾಂಬೋಧಿ

ನಾನೆಂತು ವರ್ಣಿಸಲಿ ಕೃಷ್ಣನ್ನ। ಭಕ್ತರ ಬಲೆಗೆ ಬೀಳುವವನ।।ಪ।। ರುಕ್ಮಿಣಿವಲ್ಲಭನ ಪರಮಪುರುಷನ। ಪತಿತೋದ್ಧಾರಕನ।।ಅ.ಪ।। ವಸುದೇವನುದುರದಿಜನಿಸಿ। ಅಸದಳಬಾಲೆ ಯರೊರಸಿ। ಶಿಶುಪಾಲಕನೆಂಬೊ ಹಸದಳಹೆಸರನು। ಘನನಾಟ್ಯಗೈದವನ।।1।। ಹುಟ್ಟಿದೇಳದಿನದಲಿ ಕೃಷ್ಣನ್ನ। ಆ ದುಷ್ಟ ಪೂತನಿಯನೆ ಕೊಂದು। ಕಟ್ಟಿದವರಳನೆ। ಥಟ್ಟನೆ ಸೆಳೆಯುತ। ಘನನಾಟ್ಯ ಗೈದವನ।।2।। ಬಾಲಕರರೊಡಗೂಡಿ ಬಂದೂ। ಆಕಾಳಿಯ ಮಡುವನು ಧುಮುಕಿ। ಲೀಲೆ ಯಿಂದಲಿ ಆ ಕಾಳಿಯ ಫಣೆಯೊಳು।।ಘನನಾಟ್ಯಗೈದವನಾ।।3।।

ಮೊಸರ್ ಬೇಕೇ ಮೊಸರು — ರಾಗ: ರೇವತಿ

ಮೊಸರ್ ಬೇಕೇ ಮೊಸರು। ಧೇಂಡಿ ಮೊಸರು। ಕರುಣೆ ಎಂದ್ ಹೆಸರು। ಕೇಳ್ಬೇಡಿ ಕೊಸರು।।ಪ।। ಗೋಕುಲದಲ್ಲಿ ಶ್ರೀಕೃಷ್ಣನು ತಾನೇ। ಆಕಳ ಮಂದೆ ಹೊಂದಿರುತಾನೇ। ಆ ಕರುಣಾನಿಧಿ। ಕಳಿಸಿರುತಾನೇ। ಬೇಕಾದರೆ ಬನ್ನಿ ನಾ ಕೊಡುತೇನೆ।।1।। ಎಳೆಗಂದಿಯಲ್ಲವೊ। ತಿಳಿಗಟ್ಟುವುದಿಲ್ಲ। ಕೊಳೆಯಿಲ್ಲವು ಈ ಬಿಳಿ ಮೊಸರಿನಲಿ। ತಿಳಿಯ ವೈರಾಗ್ಯ ಭಕುತಿಯುಳ್ಳ ಜನರಿಗೆ ಗೆಳೆಯ ಶ್ರೀಕೃಷ್ಣನು।। ಕಳಿಸಿದನಮ್ಮ।।2।। ಬಿಂದು ಮಾತ್ರದಿನಿಜಾನಂದವಕೊಡುವ। ಬಿಂದಿಗೆ ತಂಬಿಗೆ ತರಬೇಡಿರಮ್ಮ। ಮಂದಜನರು ತಾವರಿಯರು ಇದನು। ತಂದೆ ಪ್ರಸನ್ನನ ಪರಮ ಪ್ರಸಾದದ।।3।।

ಯಶೋದಾನಂದ ಬೇಗ ಬಾ ಕೃಷ್ಣ

ಯಶೋದಾನಂದ ಬೇಗ ಬಾ ಕೃಷ್ಣ ಮಥುರನಾಥನೆ। ವೇಣುಗಾನ ಲೋಲಾನಂದ ಬೇಗ ಬಾ ಕೃಷ್ಣಾ ಮಥುರನಾಥನೆ।।ಪ।। ತುಂಟತನವ ಪ್ರಚುರಗೊಳಿಸಿ। ಒರಳನ್ನೇ ಕಾಲಲಿ ಬಿಗಿದು। ನಡೆಕುವರರ ಶಾಪವ ಹರಿಸಿ। ನಂದ ಬೇಗ ಬಾ ಕೃಷ್ಣ ಮಥುರನಾಥನೆ।।1।। ಬಾಲತನದಿ ಮಣ್ಣನೆ ತಿಂದು। ಮಾತೆಯ ಕೋಪಕೆ ಅಂಜಿ। ಬಾಯಲ್ಲಿ ಜಗವನೆ ತೋರಿಸಿದ। ನಂದ ಬೇಗ ಬಾ ಕೃಷ್ಣ ಮಥುರನಾಥನೆ।।2।। ಕಾಳಿಂಗ ಮಡುವಲಿ ಧುಮುಕಿ। ಕಾಳಿಂಗನ ಹೆಡೆಯನೆ ತುಳಿದು। ನಾಗಸ್ತ್ರೀಯರ ಪ್ರಾರ್ಥನೆ ಸಲಿಸಿದ। ನಂದ ಬೇಗ ಬಾ ಕೃಷ್ಣ ಮಥುರನಾಥನೆ।।3।। ಮೋಹಿನಿ ರೂಪವ ಧರಿಸಿ। ಹಾಲನ್ನೇ ಹಂಚುವ ನೆವದೀ। ಸುರರನ್ನೇ ಯುಕ್ತಿಲಿ ಕಾಯ್ವ ಶ್ರೀಶಕೇಶವಾ। ಹರಿಯೇ ಚೆನ್ನಕೇಶವಾ।।4।।

ಸಂಪ್ರದಾಯ

ಬೇಗ ಬಾರೋ ಬಾಲ ಮೋಹನ **ರಾಗ: ಮೋಹನ**

ಬೇಗ ಬಾರೋ ಬಾಲ ಮೋಹನ ಹಸೆಗೇ ನೀ। ಬಾಲ ಲೀಲೆಯ ತೋರೋ ಬಾಲಾ ಮೋಹನ।।ಪ।। ಗೆಜ್ಜೆ ಕಾಲ್ ಕಡಗ ವಜ್ರಪ್ರದಾಭರಣ ಸದ್ದಿನಿಂದಲಿಡುತಾ। ವಜ್ರದ ಕಾಯನೇ ತಪ್ಪು ಹೆಜ್ಜೆಯನಿಡುತಾ।।1।। ಗೋಲಿಯಾಟವು ಮೇಲೆ ಗಜ್ಜುಗವು ಜಾಲಿ ಚೆಂಡಿನಾಟ। ಮೇಲೆನಿಪ ಬಿಲ್ಲನ್ನುರಿಯಾಟವಾಡೋ।।2।।

ಬಾಲ ಸುಂದರಾ ಬಾಬಾ **ರಾಗ:ತೋಡಿ**

ಬಾಲ ಸುಂದರಾ। ಬಾಬಾ ಹಸೆಗೇ।।ಪ।। ಲೋಲಲೋಚನಾ। ಬಾಲಕೃಷ್ಣಗೇ। ಬಾಲಕಿಯರೊಡನೇ। ಜಾಲತನದಿ ಮೆರೆವೊ।।ಅ.ಪ.।। ತರುಣಿ ಪಾಂಚಾಲೆಯು। ಭರದಿ ಸಭೆಯೊಳಗೆ। ದುರುಳ ದುಶ್ಶ್ಯಾಸನ ಸೆರಗು ಪಿಡಿದು ಸೆಳೆಯೆ। ತರುಣಿ ದೈನ್ಯದಿಂದ। ಮೊರೆಯಿಡಾಲು ನಿನಗೆ। ಕರುಣದಿಂದ ಕಾಯ್ದೆ। ವರಾಹ ರೂಪನೇ।।1।। ಕಂದ ಪ್ರಹ್ಲಾದನ। ತಂದೆ ಭಾದಿಸೆ ಕಂಡೂ। ನಿಂದು ನಿನ್ನ ಬೇಡಿ। ಕೊಂಡು ಭಜಿಸಲೂ। ಕಂದನಾ ಮೊರೆ ಕೇಳೀ। ಕಂಭದಿಂದ ಬಂದೇ। ಕಂದನನ್ನು ಕಾಯ್ದು। ಇಂದಿರೇಶನೇ।।2।। ಸುರರ ಮೊರೆಯ ಕೇಳಿ। ನರಜನ್ಮಾವನೆತ್ತಿ। ದೊರೆ ದಶರಥನೀಗೇ। ಪುತ್ರನಾಗಿ ಜನಿಸೀ। ತಿರುಗಿ ಅರಣ್ಯವಾ। ದುರುಳರಾವಣಾನ। ಶಿರವ ಛೇದಿಸಿದಾ। ರಾಮಚಂದ್ರನೇ।।3।।

ಮುರಳೀ ಲೋಲ ಮೋಹನ **ರಾಗ: ಸಿಂಧೂಭೈರವಿ**

ಮರಳೀ ಲೋಲ ಮೋಹನ ಬಾಲ। ಹರುಷದಿ ಕರೆವರು ಪೀಠಕೆ ಈಗ। ಸರಸದಿ ಬಾ ಬೇಗ। ಮುರಾರಿ ಸರಸದಿ ಬಾ ಬೇಗ।।ಪ।। ಚಂದಿರವದನದ ಸುಂದರಕಾರ। ಮಂದರಗಿರಿಧರ ಮೋಹನಾಕಾರ। ಬೃಂದಾವನದಾ ನಂದವಿಹಾರಿ। ಅಂದದ ಪೀಠಕೆ ಬಾ ಗಂಭೀರ।।1।। ವರಭದ್ರ ಹರ ಸಖನೆಂದೆನಿಸಿ। ಶರಣರ ರಕ್ಷಿಪ ಬಿರುದನು ಧರಿಸಿ। ಪರಮಾದರದಲಿ ಕರುಣವ ತೋರಿಸಿ। ಸರಸಿಯರ್ ಕರೆವರು ಬಾ ಸಂತೋಷಿಸಿ।।2।।

ಲಾಲಿ

ಆನಂದವಾಗಿದ್ದ ಆ ಸಮುದ್ರದಲ್ಲಿ **ರಾಗ: ಕುರಂಜಿ**

ಆನಂದವಾಗಿದ್ದ ಆ ಸಮುದ್ರದಲ್ಲಿ। ಆಲದೆಲೆಯೂ ಮೇಲೆ ಮಲಗಿದ್ದ ಹರಿಗೆ। ಆನಂದ ಮೂರುತಿಗೆ ತೊಟ್ಟಿಲಿಡಬೇಕೆಂದೂ। ಕರೆದು ಕೇಳಿದರು ವಿಶ್ವಕರ್ಮನ ಕೂಡ।।ಲಾಲಿ।। ನಾಲ್ಕು ವೇದಗಳ ತಂದು ಕಂಬಗಳ ನಿರಿಸೀ। ಆರು ಶಾಸ್ತ್ರವ ಹಾಕಿ ಸರಪಳಿಯ ಬಿಗಿದೂ। ವೇದ ವೇದಗಳನ್ನೆಲ್ಲಾ ವೇದಿಕೆಯ ಮಾಡಿ। ವೇದವ್ಯಾಸರು ಬಂದು ತೊಟ್ಟಿಲಿರಿಸಿದರೂ।।ಲಾಲಿ।। ಗಂಗೆ ಯಮುನೆ ಸರಸ್ವತಿಯ ಉದಕವನೆ ತಂದು। ಅಂಗನೆಯರೆಲ್ಲಾ ಆ ತೊಟ್ಟು ತೊಳೆದು। ಗಂಧಾಕ್ಷತೆ ಪುಷ್ಪ ಧೂಪ ದೀಪಗಳಿಂದಾ। ಅಲಂಕಾರ ಮಾಡಿದರು ಆ ತೊಟ್ಟಿಲನ್ನೂ।।ಲಾಲಿ।। ಬಾಳೆ ಕಿತ್ತಳೆ,

ಮಾವು, ರಸದ ದಾಳಿಂಬೇ। ನೇರಳೇ ನಿಂಬೆಯ ಹಣ್ಣನ್ನು ತಂದು। ಬಾಳೆಕಿತ್ತಳೆ ಮಾವು ಮಾದಳದ ಹಣ್ಣು। ಹಸಿ ಅಡಿಕೆ ರಸಬಾಳೆ ಕಬ್ಬು ಕಟ್ಟಿದರು।।ಲಾಲಿ।। ಅಂದುಗೆ ಕಿರುಗೆಜ್ಜೆ ಚರಣದಲಿ ಹೊಳೆಯೇ। ಹೊಂಬಣ್ಣ ಜರತಾರಿ ನಿಲುಕಟ್ಟು ಕಟ್ಟೀ। ದೃಷ್ಟಿ ಬೊಟ್ಟನೆ ಇಟ್ಟು ಹುಬ್ಬು ಬೇಗ ತಿದ್ದಿ । ಮತ್ತೆ ಕದಲಾರತಿಯನೆತ್ತಿ ಹರಸಿದರು।।ಲಾಲಿ।। ಪಾತಾಳ ಮನೆಯಲ್ಲಿ ಪಾದಕ್ಕೆ ರಕ್ಷೇ। ಮಲಗಿದ್ದ ಮನೆಯಲ್ಲಿ ಹಸ್ತಕ್ಕೆ ರಕ್ಷೇ। ಅಂಗಾಲಿಗೇ ರಕ್ಷೇ। ಆನಂದಗೆ ರಕ್ಷೇ। ಆನಂದ ಮೂರುತಿ। ಶ್ರೀರಾಮಗೆ ರಕ್ಷೆ।।ಲಾಲಿ।।

ರತ್ನದಾ ಮಂಚದ ಮೇಲೆ

ರತ್ನದಾ ಮಂಚದ ಮೇಲೆ ಪವಡಿಸಯ್ಯಾ ಪುರುಷೋತ್ತಮನೇ। ಅಚ್ಯುತಾ ನಿನಗೇ ನಾನು ಜೋಗುಳವಾ ಪಾಡುವೆನಯ್ಯಾ।।ಪ।। ರಘುವಂಶದಿ ಜನಿಸಿದ ನಿನ್ನ ದಶರಥನಾ ಕಾಂತೆಯು ತಾನು। ತೊಟ್ಟಿಲಲ್ಲಿ ತೂಗಿದ ತೆರದೀ ಜೋಗುವಳ ಪಾಡುವೆನಯ್ಯಾ।।1।। ಹದಿನಾಲ್ಕು ಲೋಕದಾ ಒಡೆಯ ನೀನೆಂದು ತಿಳಿಯದೆ ನಾನು। ಯಶೋದೆಯು ರಮಿಸಿದ ತೆರದಿ ಜೋಗುಳವ ಪಾಡುವೆನಯ್ಯಾ।।2।।ಭಕ್ತರಾಧೀನನೆ ಬಂಧನವ ಬಿಡಿಸುವವನೆ। ಮುಕ್ತಿ ಕೋರಿ ಬಂದೆನಮ್ಮ ಜೋಗುಳವ ಲಾಲಿಸೋ ಹರಿಯೇ।।3।।ಸಿರಿದೇವಿ ಭೂದೇವಿಯರ ನೀ ಧರಿಸಿ ನೆಲಸಿ ಇರುವೆ।ಶ್ರೀನಿವಾಸನೆ ಎನ್ನ ಶ್ಯಾಮಲಾಂಗ ಕೋಮಲ ವದನಾ।।4।।

ಲಾಲಿ ಶ್ರೀ ಕೃಷ್ಣಯ್ಯ — ರಾಗ: ನೀಲಾಂಬರಿ

ಲಾಲಿ ಶ್ರೀ ಕೃಷ್ಣಯ್ಯ ನೀಲ ಮೇಘ ವರ್ಣ ಬಹು ನೀಲ ಮೇಘವರ್ಣ। ಬಾಲ ಗೋಪಾಲ ಪವಡಿಂಚವಯ್ಯ।।ಪ।। ಶೃಂಗಾರಿಂಪಗಮಂಚಿ ಬಂಗಾರು ತೊಟ್ಲಲ್ಲೋ ಶಂಕುಚಕ್ರಧರ। ಸ್ವಾಮಿ ನಿದುರ ಪೋವಯ್ಯ।।1।। ಸೇತು ನೀ ಮಾರಶ್ಯೆಯ್ಯಾ ವಾಸುದೇವುಡಯ್ಯಾ ಸ್ವಾಮಿ ಶೇಷಶಯನಕರಾ ಸ್ವಾಮಿ ನಿದ್ರ ಪೋವಯ್ಯ।।2।। ಪೊದ್ದು ಚಾಲ ಆಯರಾ ಮುತ್ತೈನ ಇವ್ವರಾ ಸದ್ದಿಬೋಂ ಚೇಯರಾ ಸಖಿಯಲತೊ ಆಡರಾ।।ಯವರು ಕಾವಲೆ ನೀಕು ಇಂದರಿಲೋನೈನ ಸೊಗಸೈನ ಅಲಮೇಲು ಮಂಗಯೆ ಕಾವಲನಾ।।ನಗುಮೋಮು ಅಗುಬೀಬೀನಾಂಚಾರೇ ಕಾವಲನಾ।।3।।

ಶ್ರೀವಾಸುದೇವ ಲಾಲಿ — ರಾಗ: ಶಂಕರಾಭರಣ, ಏಕತಾಳ

ಶ್ರೀವಾಸುದೇವ ಲಾಲಿ। ಶ್ರೀತಪಾಲ ಲೀಲ ಲಾಲಿ। ದೇವಾದಿವಂದ್ಯ ಲಾಲಿ। ದೀನಜನಪಾಲ ಲಾಲಿ।।ಪ।। ಕರುಣಾಲವಾಲ ಪಾಲ। ಕಮಲಾ ವಿನೋದ ಶೀಲಾ। ಶರಣಾಗತಾನುಕೂಲ। ಕ್ಷಮಿತಾಖಿಳಾಂಕ ಜಾಲಾ।।1।। ಕಾಳೀಯ ದರ್ಪದಮನಾ। ಕರಿರಾಜ ಮಂಜುಗಮನಾ। ಲೀಲಾದಿ ಯುಗತಿಗಮನಾ। ನಿರುಪಾಯಮಾನ ವಸನಾ।।2।। ಗೋಪಾಲ ನೀಲಕಾಯ। ಗೋವಿಂದ ಭಕ್ತಗೇಯ। ತಾಪತ್ರ ಐಕ್ಯ ನಿಲಯಾ। ಶ್ರೀಪಾರ್ಥನಾಥ ನಿಲಯಾ।।3।।

ಶ್ರೀಕೃಷ್ಣಸ್ತುತಿ ಮತ್ತು ಕೊಳಲು

ದೇವರನಾಮ

ಓಂಕಾರ ಸದನ ಘೃಣಿಕಥನಾ — ರಾಗ: ಆಂದೋಳಿಕ

ಓಂಕಾರ ಸದನ ಘೃಣಿಕಥನಾ।।ಪ।। ಕಿಂಕರರ ಹೃತ್ಪಂಕಜದೊಳಗೆ। ಕಂಕಣದ ಪರಿ ಅಂಕುರಿಸಿರುವ।।ಅ.ಪ।। ಪ್ರಣವಾದಿ ಜನಿತಾಷ್ಟ ತಾರಾಕ್ಷರಾ। ತಜ್ಜನಿತ ವ್ಯಾಹೃತಿ ಜನ್ಯ ದಶ ದ್ವೇಕ್ಷದ। ಘನಗಾಯತ್ರಿ ಮಂತ್ರದೊಳು ರೂಪ ಕೃಷ್ಣಾಂತ। ಅನುಸೂಕ್ತ ನಿನಮೇಲೆ ಹಾಸಪುರಾಣದ।।1।। ಸೋಮಾರ್ಕನಲ ಧಾಮತ್ರಯ ಜೃಂಬಿತ। ತ್ರೈಮಾರ್ಗ ವ್ಯವಹಾರ ನೇಮಾದೃತ। ವ್ಯೂಮಾಭಿಮಾನೀ। ಹೃಧಾಮ ಮಹನ್ನತ। ಶ್ರೀಮೂಲ ವಾಸುದೇವಾಮ್ನಾಯ ಮಂತ್ರದ।।2।। ಅಜ